## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಇವರ ವಿರುದ್ಧ ದಾಖಲಾದ ಲೋಕಾಯುಕ್ತ ದೂರಿನ ಪ್ರಕರಣದಲ್ಲಿ ಅಭಿಯೋಜನಾ ಮಂಜೂರಾತಿ ಆದೇಶ.

**ಓದಲಾಗಿದೆ:**

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು. ಇವರ ಪತ್ರ ಸಂ. ಲೋಕ್/ಐಎನ್‌ವಿ(ಜಿ)/ಎಂ-18/ಮೊ.ನಂ.5/2013 ಚಿಕ್ಕಮಗಳೂರು, ದಿನಾಂಕ: 24-06-2014.
2. ತನಿಖಾಧಿಕಾರಿಯವರ ಅಂತಿಮ ತನಿಖಾ ವರದಿ ದಿನಾಂಕ: 02-04-2014.
3. ಅಂತಿಮ ತನಿಖಾ ದಾಖಲಾತಿಗಳಾದ ಪ್ರಥಮ ವರ್ತಮಾನ ವರದಿಯ ಪ್ರತಿ, ದೂರಿನ ಪ್ರತಿ ಮಹಜರ್, ವಶಪಡಿಸಿಕೊಂಡ ದಾಖಲೆಗಳ ಪ್ರತಿ, ಕೃತ್ಯ ನಡೆದ ಸ್ಥಳದ ನಕ್ಷೆ, ಪಂಚನಾಮ ಸಾಕ್ಷಿದಾರರ ಹೇಳಿಕೆ ಮತ್ತು ಇತರ ದಾಖಲಾತಿಗಳು.

*********

**ಪ್ರಸ್ತಾವನೆ :-**

ಮೇಲೆ (1) ರಲ್ಲಿ ಓದಲಾದ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಪತ್ರದೊಂದಿಗೆ ಪೋಲಿಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಲೋಕಾಯುಕ್ತ ಪೊಲೀಸ್ ವಿಭಾಗ, ಚಿಕ್ಕಮಗಳೂರು, ಇಲ್ಲಿ ದಾಖಲಿಸಿರುವ ಮೊಕದ್ದಮೆ ಸಂಖ್ಯೆ: 05/2013ರ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿ ಮತ್ತು ತನಿಖಾ ದಾಖಲೆಗಳ ಪ್ರತಿಗಳನ್ನು ಸರ್ಕಾರಕ್ಕೆ ಕಳುಹಿಸುತ್ತಾ, ಶ್ರೀ ಕುವರನ್, ನಿವೃತ್ತ ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೊಪ್ಪ, ಶ್ರೀ ಜಯರಾಮ್, ಕೃಷಿ ಸಹಾಯಕ, ಜಲಾನಯನ ಅಭಿವೃದ್ಧಿ ಇಲಾಖೆ, ಕೊಪ್ಪ, ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಮತ್ತು ಶ್ರೀ ವಿಜಯಕುಮಾರ್, ಮಾಜಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು ಇವರುಗಳು ಸೇರಿ ಕಾನೂನು ಬದ್ಧವಾಗಿ ಆಯ್ಕೆಯಾದ ಹೊನ್ನಗುಂಡಿ ಗ್ರಾಮದ ಕೃಷ್ಣ ಪೂಜಾರಿ ಬಿನ್ ಸೋಮಯ್ಯ ಪೂಜಾರಿಯವರ ಜಮೀನಿನ ಸರ್ವೆ ನಂಬರ್ 32ರಲ್ಲಿ ಕೃಷಿ ಹೊಂಡ ಕಾಮಗಾರಿ ಮಾಡಿಸಬೇಕಾಗಿದ್ದರೂ ಸಹ ಯಾವುದೇ ಕೃಷಿ ಹೊಂಡ ಕಾಮಗಾರಿ ಮಾಡದೆಯೇ, ಕೃಷಿ ಹೊಂಡ ಕಾಮಗಾರಿ ಮಾಡಿರುವಂತೆ ಸುಳ್ಳು ದಾಖಲಾತಿಗಳನ್ನು ಮತ್ತು ಬಿಲ್‌ಗಳನ್ನು ನೈಜ ದಾಖಲಾತಿಗಳಂತೆ ಸೃಷ್ಟಿಸಿಕೊಂಡು ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಸುಮಾರು ರೂ.23,425/-ಗಳ ಹಣವನ್ನು ಸ್ವಂತ ಲಾಭಕ್ಕೆ ಬಳಸಿಕೊಂಡು ಸರ್ಕಾರಕ್ಕೆ ಆರ್ಥಿಕ ನಷ್ಟವನ್ನು ಉಂಟುಮಾಡಿರುತ್ತಾರೆ ಹಾಗೂ ಹೊನ್ನಗುಂಡಿ ಗ್ರಾಮದ

ಶ್ರೀ ಜಿ.ವಿ. ಸದಾಶಿವ ಇವರ ಸರ್ವೇ ನಂ-32/ಪಿ-2ರ ಜಮೀನಿನಲ್ಲಿ ನಾಲಾರಿವಿಟ್‌ಮೆಂಟ್ ಕಾಮಗಾರಿಗಳನ್ನು ಮಾಡದೇ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ತಮ್ಮ ಅಧಿಕಾರ ದುರುಪಯೋಗಿಸಿಕೊಂಡು, ಅತ್ತಿಕೊಡಿಗೆ ಗ್ರಾಮ ಪಂಚಾಯ್ತಿಯಿಂದ ನಿರ್ಮಿಸಿದ ನಾಲಾರಿವಿಟ್‌ಮೆಂಟ್ ಕಾಮಗಾರಿಯ ಗೋಡೆಯ ಮೇಲೆ **DPAP 2008-2009** ಎಂದು ಗಾರೆಯಿಂದ ಬರೆಯಿಸಿ ಸುಮಾರು ರೂ. 29.969-00ಗಳನ್ನು ಅಂದರೆ (ಎರಡು ಕಾಮಗಾರಿಗಳಿಗೆ ಸೇರಿ) ಒಟ್ಟು ಮೊತ್ತ ರೂ. 53.394/-ಗಳನ್ನು ದುರುಪಯೋಗ ಪಡಿಸಿಕೊಂಡು ಸರ್ಕಾರಕ್ಕೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ ಬಗ್ಗೆ ಸದರಿಯವರುಗಳ ವಿರುದ್ಧ ಮೊಕ್ಕದ್ದಮೆ ನಂ.5/2013 ಕಲಂ 13(1)(ಸಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988 ಮತ್ತು ಕಲಂ 406, 409, 468, 471, 420, 477(ಎ) 120(ಬಿ)ಐ.ಪಿ.ಸಿ ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿರುತ್ತಾರೆ.

**2.** ಶ್ರೀ ಕುವರನ್, ನಿವೃತ್ತ ಸಹಾಯಕ ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಕೊಪ್ಪ ಇವರು ದಿನಾಂಕ:31-05-2011 ರಂದು ನಿವೃತ್ತರಾಗಿರುತ್ತಾರೆ. ಆದ್ದರಿಂದ ಶ್ರೀ ಜಯರಾಜ್, ಕೃಷಿ ಸಹಾಯಕ, ಜಲಾನಯನ ಅಭಿವೃದ್ಧಿ ಇಲಾಖೆ, ಕೊಪ್ಪ, ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಇವರುಗಳು ಕಲಂ 13(1) (ಸಿ) ಜೊತೆಗೆ 13(2) ಲಂಚ ನಿರೊಧ ಕಾಯ್ದೆ 1988 ಮತ್ತು ಕಲಂ 406, 409, 468, 471, 420, - ಜೊತೆಗೆ 477(ಎ) 120(ಬಿ) ಐ.ಪಿ.ಸಿ - ರಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಗಳು ಸಾಬೀತಾಗಿದ್ದು, ಸದರಿ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ)ರ ಅನ್ವಯ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

**3.** ಸಕ್ಷಮ ಪ್ರಾಧಿಕಾರಿಯಾದ ಸರ್ಕಾರವು, ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. ಇವರು ತಮ್ಮ -ಪತ್ರದ ದಿನಾಂಕ:26-04-2014ರೊಡನೆ ಚಿಕ್ಕಮಗಳೂರು, ಲೋಕಾಯುಕ್ತ ಪೊಲೀಸ್ ಠಾಣೆ, ಮೊಕದ್ದಮೆ ಸಂಖ್ಯೆ: 5/2013ರಲ್ಲಿ ತನಿಖಾಧಿಕಾರಿಯವರು ತನಿಖೆ ನಡೆಸಿ ದಿನಾಂಕ:02-04-2014ರಲ್ಲಿ ಕಳುಹಿಸಿಕೊಟ್ಟ ಅಂತಿಮ ತನಿಖಾ ವರದಿಯಲ್ಲಿ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಪ್ರಕರಣ ಸಂಖ್ಯೆ: 5/2013ರ ಪ್ರಥಮ ವರ್ತಮಾನ ವರದಿ 30-04-2013.
2. ಪಂಚನಾಮ, ದಿನಾಂಕ: 03-05-2013.
3. ತನಿಖೆಯ ಅಂತಿಮ ವರದಿ ದಿನಾಂಕ: 02-04-2014.
4. ಕೃತ್ಯ ನಡೆದ ಸ್ಥಳದ ನಕ್ಷೆ ಮತ್ತು ಅಂತಿಮ ವರದಿಯ ಇತರೇ ದಾಖಲಾತಿಗಳು.

(2) <u>ಈ ಕೆಳಕಂಡ ಸಾಕ್ಷಿದಾರರ ಹೇಳಿಕೆಗಳು:-</u>

1. ಶ್ರೀ ಆದಿಲ್‌ಬಾಷಾ ಬಿನ್ ಲೇ॥ ಶರೀಫಾಜಾನ್. 40 ವರ್ಷ, ದ್ವಿತಿಯ ದರ್ಜೆ ಸಹಾಯಕರು, ಜಿಲ್ಲಾ ವಕ್ಫ್ ಸಲಹಾ ಸಮಿತಿ, ಚಿಕ್ಕಮಗಳೂರು.
2. ಶ್ರೀ ಸಿ.ಜೆ. ದೀಪಕ್ ಬಿನ್ ಲೇ॥ ಗೋವಿಂದರಾಜು, 30 ವರ್ಷ, ದ್ವಿತಿಯ ದರ್ಜೆ ಸಹಾಯಕರು, ಪೌರಾಯುಕ್ತರ ಕಛೇರಿ, ನಗರ ಸಭೆ, ಚಿಕ್ಕಮಗಳೂರು.
3. ಶ್ರೀ ಟಿ.ಎನ್. ಚಿತ್ರಸೇನ ಬಿನ್ ಲೇ॥ ಟಿ.ವಿ. ನರಸಿಂಗಪ್ಪ, 53 ವರ್ಷ, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ ಉಪ ವಿಭಾಗ, ತರೀಕೆರೆ ವಾಸ ತರೀಕೆರೆ.
4. ಶ್ರೀ ಹೆಚ್.ಪಿ.ರಮೇಶ ಬಿನ್ ಲೇ॥ ಪುಟ್ಟೇಗೌಡ, 47 ವರ್ಷ, ಕಾರ್ಯದರ್ಶಿ, ಅತ್ತಿಕೊಡಿಗೆ ಗ್ರಾಮ ಪಂಚಾಯ್ತಿ, ಕೊಪ್ಪ ತಾ॥ ವಾಸ ಕೊಪ್ಪ ಚಿಕ್ಕಮಗಳೂರು.
5. ಶ್ರೀ ಎನ್. ಕೆ. ಉದಯ ಬಿನ್ ಕೃಷ್ಣಪೂಜಾರಿ, 37 ವರ್ಷ, ಬಿಲ್ಲವ ಜನಾಂಗ ಜಿರಾಯ್ತಿ ಮತ್ತು ಜೀಪ್ ಚಾಲಕ, ವಾಸ ರವಿನಗರ ಹೇರೂರು ಅಂಚೆ ಕೊಪ್ಪ ತಾ॥
6. ಶ್ರೀ ಕೆ.ಪಿ. ಗೋಪಾಲಕೃಷ್ಣ ಬಿನ್‌ಕೆ. ಪಣಿಯಪ್ಪಯ್ಯ, 44 ವರ್ಷ ಬ್ರಾಹ್ಮಣ ಜನಾಂಗ, ಜಿರಾಯ್ತಿ ಕೆಲಸ, ವಾಸ ಕವಲು ಹೊಳೆ, ಕಲ್ಲುಗುಡ್ಡೆ ಗ್ರಾಮ, ಮೇಗುಂದ ಹೊಬಳಿ, ಕೊಪ್ಪ ತಾಲ್ಲೂಕು.
7. ಶ್ರೀ ಕೃಷ್ಣಪೂಜಾರಿ ಬಿನ್ ಲೇ॥ ಸೋಮಯ್ಯಪೂಜಾರಿ, 57 ವರ್ಷ, ಬಿಲ್ಲವ ಜನಾಂಗ, ಜಿರಾಯ್ತಿ ಕೆಲಸ, ವಾಸ ನೇಪ ಬಡಾವಣೆ, ಬಸರೀಕಟ್ಟೆ ಅಂಚೆ, ಕೊಪ್ಪ ತಾ॥
8. ಶ್ರೀ ಟಿ. ದೇವೇಂದ್ರ, ಬಿನ್ ತಿಮ್ಮೇಗೌಡ, 35 ವರ್ಷ, ಜಿರಾಯ್ತಿ ಹಾಗೂ ಕೂಲಿಕೆಲಸ, ಗೌಡ್ಲು ಜನಾಂಗ ವಾಸ ಮೆಣಸಿನ ಹಾಡ್ಯ, ಕಲ್ಲುಗುಡ್ಡೆ ಅಂಚೆ, ಕೊಪ್ಪ ತಾ॥
9. ಶ್ರೀ ಬಿ.ಸಿ. ಗೋಪಾಲಗೌಡ ಬಿನ್ ಚೆಂದೇಗೌಡ, 48 ವರ್ಷ, ಗಿರಿಜನ, ಕೂಲಿಕೆಲಸ, ವಾಸ ಮೆಣಸಿನಹಾಡ್ಯ, ಕಲ್ಲುಗುಡ್ಡೆ ಅಂಚೆ, ಕೊಪ್ಪ ತಾ॥
10. ಶ್ರೀ ಜಿ.ಎಸ್. ತಿಮ್ಮಪ್ಪ, @ ತಿಮ್ಮಪ್ಪಯ್ಯಬಿನ್ ಲೇ॥ ಶಂಕರಯ್ಯ, 58 ವರ್ಷ ಬ್ರಾಹ್ಮಣ ಜನಾಂಗ, ಜಿರಾಯ್ತಿ ಕೆಲಸ, ವಾಸ ಗೋಳಿಗಂಡಿ ಮೆಣಸಿನ ಹಾಡ್ಯ, ಕಲ್ಲುಗುಡ್ಡೆ ಅಂಚೆ, ಕೊಪ್ಪ ತಾ॥
11. ಶ್ರೀ ಜಿ.ಡಿ. ನಾಗೇಗೌಡ ಬಿನ್ ಲೇ॥ ದುಗ್ಗೇಗೌಡ, 53 ವರ್ಷ ಗೌಡ್ಲು ಜನಾಂಗ, ಕೂಲಿ ಕೆಲಸ, ವಾಸ ಗದ್ದೆಮನೆ ಮೆಣಸಿನಹಾಡ್ಯ, ಕಲ್ಲುಗುಡ್ಡೆ ಅಂಚೆ, ಕೊಪ್ಪ ತಾ॥
12. ಶ್ರೀ ಜಿ.ಎಸ್. ಚಕ್ರಪಾಣಿ, ಬಿನ್ ನಾಗೇಗೌಡ, 25 ವರ್ಷ ಗೌಡ್ಲು ಜನಾಂಗ, ಕೂಲಿ ಕೆಲಸ, ~~ವಾಸ ಗಡ್ಡೆಮನೆ, ಕಲ್ಲುಗುಡ್ಡೆ ಅಂಚೆ, ಮೇಗುಂದ ಹೋಬಳಿ, ಕೊಪ್ಪ ತಾ॥~~
13. ಶ್ರೀ ಜಿ. ಶಂಕರ ಬಿನ್ ಜಿ.ಎಸ್. ತಿಮ್ಮಪ್ಪ, 27 ವರ್ಷ, ಬ್ರಹ್ಮಣ ಜನಾಂಗ, ಜೆ.ಸಿ.ಬಿ. ಮತ್ತು ವಾಹನ ಚಾಲಕ, ವಾಸ ಗೋಳಿಗುಂಡಿ, ಕಲ್ಲುಗುಡ್ಡೆ ಅಂಚೆ, ಮೇಗುಂದ ಹೋಬಳಿ, ಕೊಪ್ಪ ತಾ॥
14. ಶ್ರೀ ಜಿ.ವಿ. ಸದಾಶಿವ ಬಿನ್ ಲೇ॥ ವೆಂಕೇಗೌಡ, 50 ವರ್ಷ ಗೌಡ್ಲು ಜನಾಂಗ, ಗಿರಾಯ್ತಿ ಕೆಲಸ, ವಾಸ ಕಾಪಿತೋಟ ಮೆಣಸಿನಹಾಡ್ಯ, ಕಲ್ಲುಗುಡ್ಡೆ ಅಂಚೆ, ಕೊಪ್ಪ ತಾಲ್ಲೂಕು.
15. ಶ್ರೀ ಸುಕುಮಾರ್ ಕರ್ಕೇರ ಬಿನ್ ಲೇ॥ ಸೀನ, 37 ವರ್ಷ, ಮುಂಡಾಲ ಜನಾಂಗ, ಜಿರಾಯ್ತಿ ಕೆಲಸ ವಾಸ ಹೊನ್ನಗುಂಡಿ, ಬಸರೀಕಟ್ಟೆ ಅಂಚೆ, ಮೇಗುಂಡ ಹೋಬಳಿ, ಕೊಪ್ಪ ತಾ॥

16. ಶ್ರೀ ಕೆ. ಚಂದ್ರಶೇಕರ @ ಚಂದ್ರಶೇಕರಹೆಬ್ಬಾರ್ ಬಿನ್ ಲೇ॥ ಶೇಷಗಿರಿಯಪ್ಪ, 63 ವರ್ಷ, ನಿವೃತ್ತ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ, ವಾಸ ಸುಭಾಶ್ ರಸ್ತೆ (ಹೊಸರೋಡ್), ಶೃಂಗೇರಿ, ಶೃಂಗೇರಿ ತಾ॥
17. ಶ್ರೀ ಇ.ಎಸ್. ರಾಜು ಬಿನ್ ಸುಬ್ರಮಣ್ಯ ಜೆ.ಸಿ.ಬಿ. ಮಾಲೀಕ ವಾಸ ಇಜ್ಜಲಘಟ್ಟ, ಬ್ರಹ್ಮದೇವರಹಳ್ಳಿ ಅಂಚೆ, ನಾಗಮಂಡಲ ತಾ॥ ಮಂಡ್ಯ ಜಿ.
18. ಶ್ರೀ ವೈ, ಎಲ್. ಓಂಕಾರಪ್ಪ ಬಿನ್ ದಿ॥ ಲಕ್ಕಪ್ಪ 50 ವರ್ಷ ಹೆಡ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು.
19. ಶ್ರೀ ಉಮೇಶ ಬಿನ್ ಹನುಮಂತೇಗೌಡ, 29 ವರ್ಷ, ಪೋಲಿಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು.
20. ಶ್ರೀ ಕೆ.ಆರ್. ಕೃಷ್ಣನಾಯ್ಕ ಬಿನ್ ರೂಪ್ಲಾ ನಾಯ್ಕ್ ಆರ್. 35 ವರ್ಷ, ಸಶಸ್ತ್ರ ಮಿಸಲು ಪೋಲಿಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು.

4. ಈ ಹಿನ್ನೆಲೆಯಲ್ಲಿ 4ನೇ ಆರೋಪಿತರಾದ ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ, ಇವರು ಕಲಂ 13(1)(ಸಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988 ಮತ್ತು ಕಲಂ 406, 409, 468, 471, 420, ಜೊತೆಗೆ 477(ಎ) 120(ಬಿ) ಐ.ಪಿ.ಸಿ ರಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಗಳು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸದರಿ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ)ರ ಅನ್ವಯ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂಬುದನ್ನು ಸರ್ಕಾರವು ಮನಗಂಡಿರುತ್ತದೆ.

5. ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದು ಹಾಕುವ ಅಧಿಕಾರವುಳ್ಳದ್ದಾಗಿದ್ದು, ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ)ರಡಿಯಲ್ಲಿ ಆಪಾದಿತ ನೌಕರರಾದ ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ, ಇವರನ್ನು ಅಭಿಯೋಜನೆಗೆ ಒಳಪಡಿಸಲು ~~ಅವಶ್ಯಕ ಎಂದು ಕಂಡುಬಂದಿದ್ದರಿಂದ~~ ಸಕ್ಷಮ ~~ನ್ಯಾಯಾಲಯದಲ್ಲಿ~~ ಅವರನ್ನು ಅಭಿಯೋಜನೆಗೆ ಒಳಪಡಿಸಲು ಸರ್ಕಾರದ ಮಂಜೂರಾತಿ ನೀಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 49 ಕೃಪವಿ 2014.**
**ಬೆಂಗಳೂರು, ದಿನಾಂಕ: 25-10-2014.**

6. ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಆರೋಪಿತ ಅಧಿಕಾರಿಯವರಾದ ಶ್ರೀ ಎಂ.ಸಿ. ವಿನಯಕುಮಾರ್, ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತರೀಕೆರೆ, ಚಿಕ್ಕಮಗಳೂರು ಜಿಲ್ಲೆ ಇವರು ಕಲಂ 13(1)(ಸಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ 1988

-5-

ಮತ್ತು ಕಲಂ 406, 409, 468, 471, 420, ಜೊತೆಗೆ 477(ಎ) 120(ಬಿ) ಐ.ಪಿ.ಸಿ ರಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಗಳು ಮೇಲ್ನೋಟಕ್ಕೆ ಸಾಬೀತಾಗಿದ್ದು, ಸದರಿ ಆರೋಪಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೊಳಪಡಿಸಲು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988ರ ಕಲಂ 19(1)(ಬಿ)ರ ಅನ್ವಯ ಸರ್ಕಾರದ ಮಂಜೂರಾತಿ ನೀಡಲಾಗಿದೆ.

7. ಮುಂದುವರೆದು ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಗಳು 1977ರ ನಿಯಮ 18ರ ಪ್ರಕಾರ ಸರ್ಕಾರದ ಪರವಾಗಿ ಅಥವಾ ಸರ್ಕಾರದಿಂದ ಹೊರಡಿಸಲಾದ ಆದೇಶಗಳು ಮತ್ತು ಅಧಿಸೂಚನೆಗಳನ್ನು ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಬೇಕಾಗುತ್ತದೆ.

8. ಅದೇ ನಿಯಮಾವಳಿಯ ನಿಯಮ-19(1)ರ ಪ್ರಕಾರ ಕರ್ನಾಟಕ ಸರ್ಕಾರದ ರಾಜ್ಯಪಾಲರ ಹೆಸರಿನಲ್ಲಿ ಹೊರಡಿಸಿರುವ ಆದೇಶಗಳು ಮತ್ತು ಅಧಿಸೂಚನೆಗಳು ಒಬ್ಬ ಅಧೀನ ಕಾರ್ಯದರ್ಶಿಯವರ ಸಹಿಯಿಂದ ಅಧಿಕೃತಗೊಳ್ಳಬೇಕು ಹಾಗೂ ಅಂತಹ ಸಹಿಯು ಅಂತಹ ಆದೇಶ ಅಥವಾ ಲೇಖನವನ್ನು ಸರಿಯಾಗಿ ಅಧಿಕೃತಗೊಳಿಸುತ್ತದೆ.

9. ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿಯಮಾವಳಿ 1977ರ ಪ್ರಕಾರ ಈ ಮೇಲ್ಕಂಡ ಆದೇಶವನ್ನು ಸರ್ಕಾರದ ಪರವಾಗಿ ಕಛೇರಿಯ ಮೊಹರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿಯವರ ಸಹಿಯ ಅಡಿಯಲ್ಲಿ **ದಿನಾಂಕ:25-10-2014 ರಂದು** ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

25/10/14

(ಎಸ್.ಆರ್. ಬಸವರಾಜಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.
(ಸೇವೆಗಳು ಮತ್ತು ಸಮನ್ವಯ)

ಇವರಿಗೆ:-

ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿಗಳ ಕಟ್ಟಡ, ಅಂಬೇಡ್ಕರ್ ವೀಧಿ, ಬೆಂಗಳೂರು.

ಪ್ರತಿ:-

1. ಪ್ರಧಾನ ಮಹಾಲೇಖಪಾಲರು, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
4. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
5. ಜಂಟಿ ಕೃಷಿ ನಿರ್ದೇಶಕರು, ಚಿಕ್ಕಮಗಳೂರು.
6. ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು.
7. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿ.